

‘ಜೇಮ್ಸ್ ವೆಬ್’ ಭೂಮಿಗೆ ರವಾನಿಸಿದ ಚಿತ್ರ

10

## ಬಾಹ್ಯಾಕಾಶಕ್ಕೆ ಭೂಮಿಯ ಕಣ್ಣು

ಬ್ರಹ್ಮಾಂಡದ ರಹಸ್ಯಗಳನ್ನು ತಿಳಿಯುವ ಉದ್ದೇಶದಿಂದ 2021ರ ಡಿಸೆಂಬರ್ 25ರಂದು ಬಾಹ್ಯಾಕಾಶಕ್ಕೆ ಉಡಾವಣೆಗೊಂಡಿದ್ದ ‘ಜೇಮ್ಸ್ ವೆಬ್’ ಟೆಲಿಸ್ಕೋಪ್ 2022ರಲ್ಲಿ ಕಾರ್ಯಾರಂಭ ಮಾಡಿದ್ದು, ಬಾಹ್ಯಾಕಾಶ ಕ್ಷೇತ್ರಕ್ಕೆ ಮಹತ್ವದ ವಿದ್ಯಮಾನ. ಹತ್ತು ಬಿಲಿಯನ್ ಅಮೆರಿಕನ್ ಡಾಲರ್ ವೆಚ್ಚದ ಈ ಟೆಲಿಸ್ಕೋಪ್ ಕ್ಲಿಕ್ಕಿಸಿದ ಮೊದಲ ಚಿತ್ರ ಜುಲೈ 12ರಂದು ಭೂಮಿಗೆ ರವಾನಿಸಿತು.

ಆಧುನಿಕ ಖಗೋಳಶಾಸ್ತ್ರದ ಅತ್ಯಂತ ಪರಿಣಾಮಕಾರಿ ಬಾಹ್ಯಾಕಾಶ ದೂರದರ್ಶಕ ಯಂತ್ರ ಎನ್ನುವುದು ಜೇಮ್ಸ್ ವೆಬ್‌ನ ಹಿರಿಮೆ. ಅಮೆರಿಕದ ‘ನಾಸಾ’ದ ‘ಹಬಲ್ ದೂರದರ್ಶಕ ಯಂತ್ರ’ ಕಳೆದ ಮೂರು ದಶಕಗಳಿಂದ ಬಾಹ್ಯಾಕಾಶ ಅಧ್ಯಯನದಲ್ಲಿ ನಿರತವಾಗಿದ್ದು, ಅದರ ಕಾರ್ಯಾಚರಣೆ ಅಂತಿಮ ಹಂತ ತಲುಪಿದೆ. ಬಾಹ್ಯಾಕಾಶದಲ್ಲಿ ಹಬಲ್ ಸ್ಥಾನವನ್ನು ಜೇಮ್ಸ್ ವೆಬ್ ತುಂಬಲಿದೆ. ಜೇಮ್ಸ್ ವೆಬ್ ಮೂಲಕ ಸೃಷ್ಟಿಯ ಅನೇಕ ರಹಸ್ಯಗಳ ಸಿಕ್ಕುಬಿಡಿಸುವ ನಿರೀಕ್ಷೆ ಬಾಹ್ಯಾಕಾಶ ವಿಜ್ಞಾನಿಗಳದು.

11

## ರಾಷ್ಟ್ರಪತಿ ಭವನಕ್ಕೆ ಸ್ತ್ರೀಸ್ಪರ್ಶ

ಭಾರತದ 15ನೇ ರಾಷ್ಟ್ರಪತಿಯಾಗಿ 64 ವರ್ಷದ ದ್ರೌಪದಿ ಮುರ್ಮು ಅವರು ಆಯ್ಕೆಯಾಗಿರುವುದಕ್ಕೆ ಭಾರತೀಯ ರಾಜಕಾರಣದಲ್ಲಿ ವಿಶೇಷ ಮಹತ್ವವಿದೆ. ದೇಶದ ಅತ್ಯುನ್ನತ ಸ್ಥಾನಕ್ಕೆ ಸಂದ ಗುಡ್ಡಗಾಡು ಸಮುದಾಯದ ಮೊದಲ ಮಹಿಳೆ ಎನ್ನುವ ಅಗ್ಗಳಿಕೆ ಅವರದು. ಪ್ರತಿಭಾ ಪಾಟೀಲ್ ನಂತರ ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಎರಡನೇ ಮಹಿಳೆ ಎನ್ನುವ ಸಾಧನೆಯೂ ಅವರದಾಗಿದೆ. ಜುಲೈ 18ರಂದು ರಾಷ್ಟ್ರಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ದ್ರೌಪದಿ ಮುರ್ಮು ಅವರಿಗೆ, ಯಶ್‌ವಂತ್ ಸಿನ್ಹಾ ಸ್ಪರ್ಧೆಯೊಡ್ಡಿದ್ದರು. ಚುನಾವಣೆಯಲ್ಲಿ ನಿರಾಯಾಸವಾಗಿ ಗೆದ್ದಿರುವ ಮುರ್ಮು, ಗುಡ್ಡಗಾಡು ಸಮುದಾಯ ಹಾಗೂ ಹಿಂದುಳಿದ ವರ್ಗಗಳ ಜನತೆಯ ಅಸ್ಮಿತೆ–ಆತ್ಮವಿಶ್ವಾಸದ ಸಂಕೇತದಂತಿದ್ದಾರೆ.

